2005–2006ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ವಾಲ್ಮೀಕಿ ಆವಾಸ್ ಯೋಜನೆಯಡಿ 150 ಮನೆಗಳನ್ನು ತೆಗೆದುಕೊಳ್ಳಲಾಗಿದ್ದು, ಮನೆಗಳ ನಿರ್ಮಾಣ ಪ್ರಗತಿಯಲ್ಲಿದ್ದು ಆಗಸ್ಟ್ 2007ರ ಅಂತ್ಯಕ್ಕೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

ಇ) **ಗ್ರಾಮೀಣ ಪ್ರದೇಶ**

ಆಶ್ರಯ ಯೋಜನೆಯಡಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಜಿಲ್ಲಾವಾರು ಯಾವುದೇ ಆರ್ಥಿಕ ಗುರಿಯನ್ನು ನಿಗದಿಪಡಿಸಿರುವುದಿಲ್ಲ ಆದರೆ ಪ್ರಗತಿಯ ಆಧಾರದ ಮೇಲೆ ಅನುದಾನವನ್ನು ನೇರವಾಗಿ ನಿಗಮದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುತ್ತದೆ ಸದರಿ ಹಣವನ್ನು ಗ್ರಾಮ ಪಂಚಾಯತಿಯಿಂದ ಫಲಾನುಭವಿಗಳಿಗೆ ಚೆಕ್ ಮೂಲಕ ಬಿಡುಗಡೆ ಮಾಡಲಾಗುತ್ತದೆ

ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಬೀದರ್ ಜಿಲ್ಲೆ ಒಟ್ಟು 2280 ಮನೆಗಳಿಗೆ ಪ್ರತಿ ಮನೆಗೆ ರೂ 20000 ದಂತೆ ರೂ 456 ಲಕ್ಷ ಅನುದಾನ ನಿಗದಿಯಾಗಿದೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದ್ದು, ಈ ಪ್ರಕ್ರಿಯೆ ಮುಗಿದ ಕೂಡಲೇ ಈ ಎಲ್ಲಾ ಮನೆಗಳಿಗೆ ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು ತದನಂತರ ಹಂತ ಹಂತವಾಗಿ ಪ್ರಗತಿ ಆಧಾರದ ಉಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು

489(935) ಶ್ರೀ ಗುರುವಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಎಷ್ಟು ಕಿ ಮೀ ರಸ್ತೆಗಳು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಗೆ ಬರುತ್ತವೆ, (ವಿವಿಧ ಜಿಲ್ಲೆಗಳಲ್ಲಿ ಬರುವ ರಸ್ತೆಗಳ ಬಗ್ಗೆ ವಿವರಗಳನ್ನು ಒದಗಿಸುವುದು)

ಆ) ಪ್ರಸಕ್ತ ಸಾಲಿನಲ್ಲಿ ಈ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ನಿಗದಿ ಮಾಡಿದ್ದ ಹಣವೆಷ್ಟು, ಇದುವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚಾಗಿದೆ, (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಈ ಭಾಗದಲ್ಲಿ ಬರುವ ಬಹುತೇಕ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ರಸ್ತೆಗಳನ್ನು ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತಿಗಳ ರಸ್ತೆಗಳ ವಿವರಗಳು ಈ ಕೆಳಕಂಡಂತಿದೆ

ಕ್ರ ಸಂ	ಜಿಲ್ಲೆ	ರಸ್ತಗಳ ಉದ್ದ (ಕಿ ಮೀ ಗಳಲ್ಲಿ)
1	ಗುಲ್ಬರ್ಗಾ	9402 15
2	ಬೀದರ್	2465 98
3	ಬಳ್ಳಾರಿ	4366 35
4	ಕೊಪ್ಪಳ	2612 20
5	ರಾಯಚೂರು	3994 55
6	ದಾವಣಗೆರೆ (ಹರಪ್ಪನಹಳ್ಳಿ ತಾ ಮಾತ್ರ)	331 60
ಒಟ್ಟು		**23172 83**

ಆ) ಪ್ರಸಕ್ತ ಸಾಲಿನಲ್ಲಿ ಈ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಒಟ್ಟು ರೂ 4488 39 ಲಕ್ಷಗಳನ್ನು ನಿಗದಿಪಡಿಸಿದೆ ರೂ 5110 07 ಲಕ್ಷಗಳನ್ನು ಬಿಡುಗಡೆ ಮಾಡಿದೆ ಹಾಗೂ ರೂ 1168 19 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಇ) ಬಂದಿದೆ 2006–07ನೇ ಸಾಲಿನಲ್ಲಿ ಸರ್ಕಾರವು ಈ ಭಾಗದ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು 12ನೇ ಹಣಕಾಸು ಆಯೋಗದ ಯೋಜನೆ, ಗ್ರಾಮೀಣ ಸಂಪರ್ಕ ಮತ್ತು ಸೇತುವೆಗಳು (5054), ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (3054) ಮುಂತಾದ ಯೋಜನೆಗಳನ್ನು ತಯಾರಿಸಿದ್ದು, ಈ ಯೋಜನೆಗಳಡಿಯಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಅನುಬಂಧ

ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತಿ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ವಿವಿಧ ಯೋಜನೆಗಳಡಿಯಲ್ಲಿ ಒದಗಿಸಿರುವ ಅನುದಾನದ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	ಲೆಕ್ಕಶೀರ್ಷಿಕೆ 3054			ಲೆಕ್ಕಶೀರ್ಷಿಕೆ 5054			12ನೇ ಹಣಕಾಸು ಆಯೋಗದಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ			ಒಟ್ಟು		
		ನಿಗದಿ ಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ವೆಚ್ಚ	ನಿಗದಿ ಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ವೆಚ್ಚ	ನಿಗದಿ ಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ವೆಚ್ಚ	ನಿಗದಿ ಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ವೆಚ್ಚ
1	ಗುಲ್ಬರ್ಗ	643 88	1037 06	322 36	179 88	179 88	44 51	511 35	395 68	0 00	1335 11	1612 62	366 87
2	ಬೀದರ್	281 50	487 08	190 47	78 64	78 64	0 00	264 37	159 19	0 00	624 51	724 91	190 47
3	ಬಳ್ಳಾರಿ	325 95	633 04	83 47	91 80	91 80	9 43	463 63	264 31	0 00	881 38	989 15	92 90
4	ಕೊಪ್ಪಳ ದಾವಣಗೆರೆ	229 03	482 06	201 70	63 99	63 99	42 43	299 30	178 65	0 00	592 32	724 70	244 13
5	(ಹರಪ್ಪನಹಳ್ಳಿ ತಾ ಮಾತ್ರ)	58 38	97 38	12 00	19 14	19 14	2 23	125 97	62 98	0 00	203 49	179 50	14 23
6	ರಾಯಚೂರು	308 31	564 46	198 02	86 19	86 19	61 57	457 08	228 54	0 00	851 58	879 19	259 59
	ಒಟ್ಟು	**1847 05**	**3301 08**	**1008 02**	**519 64**	**519 64**	**160 17**	**2121 70**	**1289 35**	**0 00**	**4488 39**	**5110 07**	**1168 19**